# ಡಾ. ಬಿ. ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ






## ಸ್ವಯಂ ಉದ್ಯೋಗ-ನೇರಸಾಲ ಯೋಜನೆ

- ಸ್ವಯಂ ಉದ್ಯೋಗ ನೇರಸಾಲ ಯೋಜನೆಯಡಿ ಪರಿಶಿಷ್ಟ ಜಾತಿಯ ಯುವಕ ಯುವತಿಯರಿಗೆ ಹಣ್ಣು ಮತ್ತು ತರಕಾರಿ, ಮೀನು-ಮಾಂಸ ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ ಇತ್ಯಾದಿ ಕಿರು ಆರ್ಥಿಕ ಚಟುವಟಿಕೆಗಳಿಗೆ ರೂ. 50,000/- ಘಟಕ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

- ಘಟಕ ವೆಚ್ಚದ ಪೈಕಿ ರೂ. 25,000/- ಸಹಾಯಧನ ಹಾಗೂ ರೂ. 25,000/- ಸಾಲದ ಮೊತ್ತವನ್ನು ನಿಗಮದಿಂದ ಭರಿಸಲಾಗುವುದು. ಸಾಲದ ಮೊತ್ತಕ್ಕೆ ವಾರ್ಷಿಕ ಬಡ್ಡಿ ಶೇ.4 ರಷ್ಟು ವಿಧಿಸಲಾಗುತ್ತಿದೆ.

- ಕೋವಿಡ್-19ರ ಹಿನ್ನಲೆಯಲ್ಲಿ 2020-21ನೇ ಸಾಲಿನಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

### ಕೈಗೆತ್ತಿಕೊಳ್ಳಬಹುದಾದ ಕೆಲವು ಅರ್ಥಿಕ ಚಟುವಟಿಕೆಗಳು;- (ಉದ್ದೇಶಗಳು)

- ಹೈನುಗಾರಿಕೆ, ಕೋಳಿ ಸಾಕಾಣಿಕೆ, ಹಂದಿ, ಮೊಲ ಸಾಕಾಣಿಕೆ, ಹಣ್ಣು ಮತ್ತು ತರಕಾರಿ, ಮೀನು-ಮಾಂಸ ಮಾರಾಟ ಹಾಗೂ ಇತರೆ ಯಾವುದೇ ಲಾಭದಾಯಕ ಸಣ್ಣ ಕೈಗಾರಿಕೆ/ಸೇವಾ ಘಟಕ/ವ್ಯಾಪಾರ ಉದ್ದಿಮೆ ಪ್ರಾರಂಭಿಸಲು.

### ಸೌಲಭ್ಯ ಪಡೆಯಲು ಅರ್ಜಿದಾರರಿಗೆ ಇರಬೇಕಾದ ಅರ್ಹತೆಗಳು:-

- ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಕನಿಷ್ಠ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಅರ್ಜಿದಾರರ ವಯಸ್ಸು 18 ರಿಂದ 50 ವರ್ಷಗಳ ಒಳಗಿರಬೇಕು.
- ಅರ್ಜಿದಾರರ ಕುಟುಂಬದ ಸದಸ್ಯರಲ್ಲಿ ಯಾರೊಬ್ಬರೂ ಸರ್ಕಾರಿ ನೌಕರಿಯಲ್ಲಿರಬಾರದು.

- ಅರ್ಜಿದಾರರು/ಕುಟುಂಬದ ಅವಲಂಭಿತ ಯಾವುದೇ ಸದಸ್ಯರು ಈ ಹಿಂದೆ ನಿಗಮ/ಸರ್ಕಾರದಿಂದ ರೂ.1,00,000/- ಮೇಲ್ಪಟ್ಟು ಸೌಲಭ್ಯ ಪಡೆದಿದ್ದಲ್ಲಿ, ಅಂತಹ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.
- ಅರ್ಜಿದಾರರು ಘಟಕವನ್ನು ಸ್ಥಾಪಿಸಲು ಅವಶ್ಯವಿರುವ ಸ್ಥಳಾವಕಾಶವನ್ನು ಹೊಂದಿರಬೇಕು.
- ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನವು ರೂ. 1,50,000/- ಗ್ರಾಮೀಣ ಹಾಗೂ ರೂ. 2,00,000/- ನಗರ ಪ್ರದೇಶದವರಿಗೆ ಮಿತಿಯೊಳಗಿರಬೇಕು.

## ಆನ್‌ಲೈನ್ ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು :-

- ಅರ್ಜಿದಾರರ ಭಾವಚಿತ್ರ
- ಜಾತಿ ಪ್ರಮಾಣ ಪತ್ರ
- ಆದಾಯ ಪ್ರಮಾಣ ಪತ್ರ
- ಪಡಿತರ ಚೀಟಿ
- ಗುರುತಿನ ಚೀಟಿ (ಆಧಾರ್ ಕಾರ್ಡ್/ಚುನಾವಣಾ ಗುರುತಿನ ಚೀಟಿ/ಡ್ರೈವಿಂಗ್‌ಲೈಸನ್ಸ್/ಪಾನ್‌ಕಾರ್ಡ್/ಭಾವಚಿತ್ರವಿರುವ ಬ್ಯಾಂಕ್ ಪಾಸ್‌ಪುಸ್ತಕ/ಪಾಸ್‌ಪೋರ್ಟ)
- ಉದ್ದೇಶಿತ ಕಸುಬಿನಲ್ಲಿ ತರಬೇತಿ ಅಥವಾ ಅನುಭವ ಹೊಂದಿದಲ್ಲಿ ಪ್ರಮಾಣ ಪತ್ರ
- ದರಪಟ್ಟಿ ಮತ್ತು ಯೋಜನಾ ವರದಿ

## ಫಲಾನುಭವಿಗಳ ಆಯ್ಕೆ ವಿಧಾನ ಹಾಗೂ ಯೋಜನೆ ಅನುಷ್ಠಾನದ ವಿವಿಧ ಹಂತಗಳು:-

- ಅರ್ಜಿದಾರರು ಈ ಯೋಜನೆಯಡಿ ಸೌಲಭ್ಯ ಪಡೆಯಲು ನಿಗದಿಪಡಿಸಿದ ದಾಖಲೆಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ ಆಯ್ಕೆ ಸಮಿತಿಗೆ ಅರ್ಜಿಯನ್ನು ಮಂಡಿಸಲಾಗುವುದಿಲ್ಲ.
- ಸ್ವೀಕರಿಸಿದ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿನ ಆಯ್ಕೆ ಸಮಿತಿ ಸಭೆಗೆ ಮಂಡಿಸಲಾಗುವುದು.
- ಮಹಿಳೆಯರಿಗೆ ಶೇ. 33.33 ಹಾಗೂ ಅಂಗವಿಕಲರಿಗೆ ಶೇ.3ರಷ್ಟು ಮೀಸಲಾತಿ ಅನ್ವಯ ಆಯ್ಕೆ ಮಾಡಲಾಗುವುದು.
- ಆಯ್ಕೆ ಸಮಿತಿಯಿಂದ ಆಯ್ಕೆಯಾದ ಬಗ್ಗೆ ಅರ್ಜಿದಾರರಿಗೆ ಅಂಚೆ/ಎಸ್.ಎಮ್.ಎಸ್ ಮೂಲಕ ತಿಳಿಸಲಾಗುವುದು ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಆಯ್ಕೆ ಸಮಿತಿ ಮೂಲಕ ಆಯ್ಕೆ ಮಾಡಲ್ಪಟ್ಟ ಅರ್ಜಿದಾರರ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಕುರಿತು ಜಿಲ್ಲಾ ಕಛೇರಿಗೆ ವರದಿ ಸಲ್ಲಿಸುವರು.
- ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಅರ್ಹರೆಂದು ವರದಿ ಸಲ್ಲಿಸಿದ ಅರ್ಜಿದಾರರು ಮೂಲ ದಾಖಲೆಗಳನ್ನು ಜಿಲ್ಲಾ ಕಛೇರಿಗೆ ಹಾಜರುಪಡಿಸಿ ಜಿಲ್ಲಾ ವ್ಯವಸ್ಥಾಪಕರಿಂದ ಧೃಢೀಕರಿಸಿದ ನಂತರ ಅರ್ಜಿಗಳನ್ನು ಫಲಾನುಭವಿಗಳು ಸೂಚಿಸಿದ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗುವುದು ಹಾಗೂ ಫಲಾನುಭವಿಗಳಿಗೆ ಅಂಚೆ/ಎಸ್.ಎಮ್.ಎಸ್

ಮೂಲಕ ಮಾಹಿತಿ ಕೊಡಲಾಗುವುದು. ಅಥವಾ ಅರ್ಜಿದಾರರೇ ನೇರವಾಗಿ ನಿಗಮದ ಅಂತರ್ಜಾಲ ತಾಣದಲ್ಲಿ ಅರ್ಜಿ ಸಂಖ್ಯೆ ದಾಖಲಿಸಿ ತಿಳಿದುಕೊಳ್ಳಬಹುದು.

- ಅರ್ಜಿದಾರರು ಪ್ರಾರಂಭಿಸಲು ಉದ್ದೇಶಿಸಿರುವ ಘಟಕದ ಸ್ಥಾಪನೆಯ ಸಾಧ್ಯತೆ ಮತ್ತು ಆರ್ಥಿಕ ಸಿಂಧುತ್ವ ಆಧರಿಸಿ ಸಾಲ ಮಂಜೂರಾತಿ ನೀಡಲಾಗುವುದು.
- ಫಲಾನುಭವಿಯು ಉದ್ದೇಶಿತ ಘಟಕವನ್ನು ಸ್ಥಾಪಿಸಿ ನಿಗಮಕ್ಕೆ ಮಾಹಿತಿ ನೀಡುವುದು.
- ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿಗಳು ನಿಗಮದ ಸಹಾಯಧನ ಹಾಗೂ ಸಾಲವನ್ನು ನಿಗದಿತ ಉದ್ದೇಶಕ್ಕೆ ಫಲಾನುಭವಿಯು ಬಳಕೆ ಮಾಡಿ ಉತ್ಪಾದಕ ಘಟಕ ಪ್ರಾರಂಭಿಸಿರುವ ಕುರಿತು ಸ್ಥಳ ಪರಿಶೀಲನಾ ವರದಿಯನ್ನು ಪೋಟೋ ಸಮೇತ ಜಿಲ್ಲಾ ಕಛೇರಿಗೆ ಸಲ್ಲಿಸುವರು.

***********